ಶ್ರೀ ಎಸ್. ಎಸ್. ಅರಕೇರಿ.—ಕೆರೆಗಳ ನೆಲುವಾಗಿ ರೈತರಿಂದ ಜಮೀನುಗಳನ್ನು ತೆಗೆದು ಕೊಂಡು ಐದಾರು ವರ್ಷವಾದರೂ ಪರಿಹಾರ ಧನವನ್ನು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—It is outside the scope of the question.

ಶ್ರೀ ಕೆ. ಎಂ. ತಮ್ಮಯ್ಯ.—15 ವರ್ಷ ಕಳೆದರೂ ಕೂಡ ಆ ಜಮೀನುಗಳಿಗೆ ಕಾಂಪೆನ್ ಸೇಷನ್ ಕೊಡದೆ ಇರುವುದರಿಂದ ಹಿಂದೆ ಒಂದು ಸಾವಿರ ರೂಪಾಯಿ ಒಂದು ಎಕರೆಗೆ ಇದ್ದುದು ಈಗ ನಾಲ್ಕು ಸಾವಿರ ರೂಪಾಯಿ ಕೊಡಬೇಕಾಗಿ ಬಂದಿರುವುದು ಗೊತ್ತಿದೆಯೇ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಈ ಸಂಬಧದಲ್ಲಿ 15 ವರ್ಷ ಆಗಿಲ್ಲ.

ಶ್ರೀ ಎನ್. ಎಲ್ ಬೆಲ್ಲದ.—ಜಮೀನು ಕಳೆದುಕೊಂಡವರಿಗೆ, ಅರಣ್ಯ ಇಲಾಖೆಯ ಸ್ವಾಧೀನದಲ್ಲಿ ಮತ್ತು ರೆವೆನ್ಯೂ ಇಲಾಖೆಯ ಸ್ವಾಧೀನದಲ್ಲಿ ಇರುವ ಜಮೀನುಗಳನ್ನು ಮಂಜೂರು ಮಾಡುವಾಗ ಇಂಥವರಿಗೆ ಪ್ರಾಶಸ್ತ್ಯ ಕೊಡಬೇಕೆಂದು ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಭೂಮಿಯನ್ನು ಕಳೆದುಕೊಂಡಿರುವವರಿಗೆ ಪರಿಹಾರ ಕೊಡುತ್ತೇವೆ. ಆದರೂ ಕೂಡ ಬೇರೆ ಕಸಬು ಇಲ್ಲದೆ ಇರುವುದರಿಂದ ಇವರ ಅರ್ಜಿಗಳನ್ನು ಸಾಧ್ಯವಾದಮಟ್ಟಿಗೆ ಸಹಾನುಭೂತಿಯಿಂದ ನೋಡಿ ಎನ್ನುವುದನ್ನು ಹೇಳುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಜಮೀನನ್ನು ಕಳೆದು ಕೊಂಡವರಿಗೆ ಕೇಳಿದರೆ ಬೇರೆ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಸಾಧ್ಯವಾದಮಟ್ಟಿಗೆ ಅವಕಾಶವಿದ್ದರೆ ಕೊಡುತ್ತೇವೆ.

Allocation of Water Under Godavari Basin

*Q.—899. Sri MANIK RAO SHAM RAO (Aurad).—

Will the Minister for Public Works be pleased to state:—

(*a*) the total allocation of water under Godavari basin to Mysore State ;

(*b*) the total quantity of water availed by Andhra Pradesh Government under Nizamsagar Project and Sanga Reddy Water Supply Reservoir ;

(*c*) whether it has come to the notice of Government that projects like Nandikunda and extension of present Nizamsagar Project are under active consideration of Andhra Pradesh Government ;

(*d*) if so whether it would affect the proposed Manjra Project of Bidar District ;

(*e*) whether the State Government has drawn the attention of Government of India in this behalf ?

*A.—Sri VEERENDRA PATIL.—(Minister for Public Works).—

(*a*) No allocation has been made, but it has been stated by the Minister for Irrigation and Power in his statment made in Lok-Sabha on 23rd March 1963 that there would be no difficulty in meeting the requirements of the contemplated projects in the Mysore State in Godavari Basin.

(*b*) (i) Nizamsagar Project Existing utilisation : 44.1 T.M.C.ft.

(ii) Proposed utilisation : 57. 73 T.M.C.ft.

(iii) Manjra water supply scheme at Sanga Reddy proposed utilisation : 2.45 T.M.C.ft.

(*c*) Nandikunda Project is now known as Nigarjunasagar Project and lies across Krishna River and the First Stage of this Project is under construction in the Andhra Pradesh. Regarding the extension of Nizamsagar by the Andhra-Pradesh, information is not available.

(*d*) In view of the reply at (*a*) above it does not arise.

(*e*) Does not arise.

Sri MANIK RAO SHAM RAO.—Supplementary to (a): What is the legitimate share and right of the Mysore State in the Godavari Basin ?

Sri VEERENDRA PATIL.—It is only Bidar which lies in the Godavari Basin. Our demands are for 24 T.M.C. ft. and the Government of India have said that there is no difficulty to allocate this much of water.

Sri V. N. PATIL.—Manjra and Karanji have contributed to Godavari and as such should we not press for our legitimate share ?

Sri VEERENDRA PATIL.—They are the tributaries of Godavari. We have contemplated projects on those rivers and we are investigating them. For instance, we are investigating Manjra, Karanji Chulkinala, Devenala and Nagoora. Of these, the project report for Karanji is ready and we are forwarding it to the Government of India for technical clearance.

Sri MANIK RAO SHAM RAO.—As per the Gulhati Commission Report, the legitimate share of Andhra is 40 T.M.C. ft. We should utilise 44 T.M.C. ft. and the proposed utilisation is about 57 T.M.C. ft. What would be the effect of the proposed Manjra Bridge ?

Sri VEERENDRA PATIL.—So far as the Godavari Basin is concerned, we have no problem because our demand itself is limited ; we have demanded only 24 T.M.C. ft. and the Government of India has said that there is no difficulty in allocating that much of water.

Sri MANIK RAO SHAM RAO.—Has the Government got any programme to utilise the Manjra water to the fullest extent ?

Sri VEERENDRA PATIL.—That is why I said that we have already contemplated certain projects. In certain cases we have prepared the project reports and are forwarding them to the Government of India.

ಶ್ರೀ ಎಸ್ ಶರಣಗೌಡ ಇನಾಂದಾರ್.—ಅಂಧ್ರದವರು ಈಗಾಗಲೆ ಅವರ ಯೋಜನೆಗಳನ್ನು ವೇಗವಾಗಿ ಮುಂದುವರೆಸುತ್ತಿರುವುದರಿಂದ ನಾವೂ ನಮ್ಮ ಯೋಜನೆಗಳನ್ನು ಬೇಗ ಮಾಡದಿದ್ದರೆ ಜಗಳ ಬಂದು ನಮಗೆ ದೊರೆಯುವ ನೀರಿಗೆ ತೊಂದರೆ ಬರುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಗೋದಾವರಿ ವಿಚಾರದಲ್ಲಿ ಆ ಪ್ರಶ್ನೆ ಬರುವುದಿಲ್ಲ. ಅದರಲ್ಲಿ ಬೇಕಾದಷ್ಟು ನೀರಿದೆ, ಡೈವರ್‌ಷನ್ ಯೋಜನೆ ಬೇರೆ ಇದೆ. ಕೃಷ್ಣಾ ಬೇಸಿನ್‌ಗೆ ಗೋದಾವರಿಯ ನೀರನ್ನು ಡೈವರ್ಟ್ ಮಾಡಬೇಕೆಂದಿರುವುದರಿಂದ ಗೋದಾವರಿಯಲ್ಲಿ ಉಪಯೋಗಿಸಲು ಸಾಕಾದಷ್ಟು ನೀರಿದೆ ಎಂದು ಅರ್ಥವಾಗುತ್ತದೆ. ಗೋದಾವರಿ ನೀರಿನ ಬಗ್ಗೆ ನಮ್ಮ ಡಿಮ್ಯಾಂಡ್ ಇರುವುದು ಕೇವಲ 24 ಟಿ.ಎಂ.ಸಿ.ಎಫ್. ಟಿ.ಗೆ ಮಾತ್ರ. ಈಗಾಗಲೇ ಸುಮಾರು 18—19 ಟಿ.ಎಂ.ಸಿ.ಎಫ್.ಟಿ. ಸಲುವಾಗಿ ಪ್ರಾಜೆಕ್ಟ್ ವರದಿ ತಯಾರಿಸುತ್ತಿದ್ದೇವೆ.

Sri V. N. PATIL.— Is the demand that we have made based on the extent of our right for waters or on the purse that we have ?

Sri VEERENDRA PATIL.— When we make a demand we make the demand depending upon the capacity to utilize the water. We must have area to utilize that water. What is the use of making demand if we do not have sufficient area to utilize that water ?

Plying of Bus to Kuradi

*Q.—600. Smt. NAGAMMA SESHAPPA (Kalmala).—

Will the Minister for Transport and Tourism be pleased to state:—

(*a*) whether it is a fact that there is a population of 8,000 in Kuradi Village, Manvi Taluk ;

(*b*) whether they are aware that there is a distance of 3½ Miles between Raichur-Manvi Road and Kuradi and also there is a necessity of a bus to ply up to Kuradi both in the morning as well as in the evening ;

(*c*) the reason for not making the said arrangements so far ?

*A.—Sri H. C. BORAIAH (Deputy Minister for Transport).—

(*a*) The population of Kuradi Village is about 6,000.

(*b*) Kuradi Village is situated about 4 miles (6.4 kms.) away from the Raichur-Manvi Road. There appears to be a need to operate a service.

(*c*) This is a fair weather road and not motorable during the monsoon.

ಶ್ರೀಮತಿ ನಾಗಮ್ಮ ಶೇಶಪ್ಪ.—ಮಾನ್ವಿ ತಾಲ್ಲೂಕು ಕುರಡಿ ಗ್ರಾಮದಲ್ಲಿ 8 ಸಾವಿರ ಜನಸಂಖ್ಯೆ ಇರುವುದು ನಿಜವೇ ?

ಶ್ರೀ ಎಚ್. ಸಿ. ಬೋರಯ್ಯ.—6 ಸಾವಿರ ಜನಸಂಖ್ಯೆ ಇದೆ ಎಂದು ಹೇಳಿದ್ದೇನೆ.

ಶ್ರೀಮತಿ ನಾಗಮ್ಮ ಶೇಶಪ್ಪ.—ಮಾನ್ವಿ ರಸ್ತೆಯಿಂದ ಸುಮಾರು ಮೂರೂವರೆ ಮೈಲಿ ದೂರ ದಲ್ಲಿದ್ದು, ಬೆಳಿಗ್ಗೆ ಸಾಯಂಕಾಲ ಒಂದೊಂದು ಬಸ್ಸ್‌ನ್ನು ಕುರಡಿವರೆಗೂ ಓಡಿಸುವ ಅವಶ್ಯಕತೆ ಇರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಗಮನಕ್ಕೆ ಬಂದಿದೆ, ಈಗಿರತಕ್ಕದ್ದು ಕಚ್ಚಾ ರಸ್ತೆಯಾಗಿರುವುದರಿಂದ ಮಳೆಗಾಲದಲ್ಲಿ ಓಡಿಸುವುದಕ್ಕೆ ಆಗುವುದಿಲ್ಲ, ಅನುಕೂಲವಾದ ವಾತಾವರಣದಲ್ಲಿ ಓಡಿಸುವುದಕ್ಕೆ ಸಾಧ್ಯ, ಈ ಸಾರಿ ಮಳೆಗಾಲವಾದ ಮೇರೆ ಬಸ್ಸನ್ನು ಓಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ.